ಕಲಿಯುವ ಪ್ರೀತಿಯುಳ್ಳವರಿಗಾಗಿ

# ಸಂಪದ

ಕನ್ನಡ

ಶೈಕ್ಷಣಿಕ ಸಂಪನ್ಮೂಲ ಸಂಚಿಕೆ – ೧ / ಜೂನ್-ಜುಲೈ ೨೦೧೯-೨೦

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಈ ಸಂಚಿಕೆಯಲ್ಲಿ.....

* 'ಹುತ್ತರಿಯ ಹಾಡು' ಪದ್ಯಕ್ಕೆ ಪೂರಕ – ಪುಟ: ೧
* 'ಸ್ವಾತಂತ್ರ್ಯದ ಹಣತೆ' ಪದ್ಯಕ್ಕೆ ಪೂರಕ – ಪುಟ: ೩

## ಪಂಜೆ ಮಂಗೇಶರಾಯರು



"ಕವಿಶಿಷ್ಯ"ರೆಂದೆ ಕನ್ನಡ ನಾಡಿನ ಜನತೆಗೆ ಚಿರಪರಿಚಿತರಾದ ಪಂಜೆ ಮಂಗೇಶರಾಯರು ಉತ್ತಮ ಶಿಕ್ಷಕರು ಆಗಿದ್ದರು. ಇವರು ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ಗ್ರಾಮದಲ್ಲಿ ಫೆಬ್ರುವರಿ ೨೨, ೧೮೭೪ ರಲ್ಲಿ ಜನಿಸಿದರು. ತಂದೆ ರಾಮಪ್ಪಯ್ಯ, ತಾಯಿ ಶಾಂತಾದುರ್ಗ. ತಂದೆ ಸಂಸ್ಕೃತ ವಿದ್ವಾಂಸರು ಆಗಿದ್ದರಿಂದ ಪಂಜೆಯವರು ಸಹಜವಾಗಿಯೇ ಪದ್ಯಗಳನ್ನು ರಾಗವಾಗಿ ಹಾಡುವುದನ್ನು ಕಲಿತರು. ಇವರಿಗೆ 'ಪಂಜೆ' ಎಂಬ ಹೆಸರು ಬರಲು ಕಾರಣ – ಇವರು ಮೂಲತಃ ಪಂಜೆ ಎಂಬ ಗ್ರಾಮದವರು, ಕಾರಣಾಂತರದಿಂದ ಬಂಟವಾಳ ಗ್ರಾಮದಲ್ಲಿ ನೆಲೆಸಿದ್ದರು.

೧೯೨೧ರಲ್ಲಿ ಶಾಲಾ ಇನ್ಸಪೆಕ್ಟರ್ ಆಗಿ ಮಂಗಳೂರು, ಮಡಿಕೇರಿ ಮತ್ತು ಕೊಡಗು ಜಿಲ್ಲೆಗಳಲ್ಲಿ ಸೇವೆಸಲ್ಲಿಸಿದರು. ವಿಶೇಷವೆಂದರೆ, ಪಂಜೆಯವರು ಗುಡ್ಡಗಾಡು ಪ್ರದೇಶಗಳಲ್ಲಿರುವ ಶಾಲೆಗಳಿಗೆ ಭೇಟಿ ನೀಡುವಾಗ ನಿಸರ್ಗದ ಸವಿಯನ್ನು ಸವಿಯುತ್ತಾ ಕಾವ್ಯ ರೂಪದಲ್ಲಿ ಆ ಸೌಂದರ್ಯವನ್ನು ಸೆರೆ ಹಿಡಿದು ಹಾಡಿನ ಮೂಲಕ ಹೊರಹಾಕುತ್ತಿರುವುದು.

ಅವರ ಎಲ್ಲ ಸಂಶೋಧನಾ ಲೇಖನಗಳನ್ನು "ಪಂಚಕಜ್ಜಾಯ" ಎಂಬ ಹೆಸರಿನಿಂದ ಪ್ರಕಟವಾಗುತ್ತಿದ್ದವು. ಮಕ್ಕಳ ಕಥೆ, ಕವನಗಳು, ಕಾದಂಬರಿ, ನೀಳ್ಗತೆ, ಸಣ್ಣಕಥೆ, ಕಥನ ಕವನಗಳು, ಶೋಕಗೀತೆ, ಅನುವಾದ, ಸಂಪಾದನೆ, ಲಲಿತ ಪ್ರಬಂಧ, ವ್ಯಾಕರಣ.... ಮೊದಲಾದ ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ಗಮನೀಯ ಕೊಡುಗೆ ನೀಡಿದ್ದರೂ ಪಂಜೆ ಎಂದರೆ ತಕ್ಷಣ ನೆನಪಿಗೆ ಬರುವದು "ಮಕ್ಕಳ ಸಾಹಿತ್ಯ ರಚಕ" ರೆಂದೇ. ಇವರ ಕವನಗಳಲ್ಲಿ ಪ್ರಾಸ, ಛಂದಸ್ಸು ಹೇರಳವಾಗಿ ಬಳಕೆಯಾಗಿರುವುದು ಕಂಡು ಬರುತ್ತದೆ.

ಪಂಜೆಯವರು ರಚಿಸಿದ ಕವನ "ಹುತ್ತರಿ ಹಾಡು" ಕೊಡವ ಜನಾಂಗವು "ರಾಷ್ಟ್ರಗೀತೆ"ಯನ್ನಾಗಿ ಮಾಡಿಕೊಂಡಿದ್ದಾರೆ. "ತೆಂಕಣ ಗಾಳಿಯಾಟ" ಕವನವು ದಕ್ಷಿಣ ಕನ್ನಡ ಮುಂಗಾರು ಮಳೆಯ ಸೌಂದರ್ಯವನ್ನು ವಿವರಿಸುತ್ತದೆ. " ಹೊಲೆಯರ ಹಾಡು" ದಲಿತರ ಕುರಿತು ಸೃಜನಾತ್ಮಕ ಚಿಂತನೆ ಜಾಗೃತಿಯನ್ನು ಮೂಡಿಸುವ ಕವನ. "ಸಂಜೆಯ ಹಾಡು", "ಡೊಂಬರ ಚೆನ್ನ", "ಕಡೆಕಂಜ", "ರಂಗಸೆಟ್ಟಿ" ಮತ್ತು "ನಾಗರಹಾವೆ ಹಾವೊಳು ಹೂವೆ" ಮುಂತಾದ ಕವನ ಸಂಕಲನಗಳು. "ನನ್ನ ಚಿಕ್ಕ ತಾಯಿ", "ನನ್ನ ಚಿಕ್ಕ ತಂದೆ", "ನನ್ನಹೆಂಡತಿ" ಮತ್ತು "ಕಮಲಾಪುರ ಹೋಟೆಲ್"ನಲ್ಲಿ ಇವು ಕಥೆಗಳು. "ವೀರಮತಿ", "ಶೈಲಿನಿ" ಮತ್ತು "ಮೃಥುಲಾ" ಇವು ಐತಿಹಾಸಿಕ ಕಥೆಗಳು. "ಅಣ್ಣನ ವಿಲಾಪ" ಶೋಕಗೀತೆಯಾಗಿದೆ.

೧೯೩೪ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಪಂಜೆಯವರು ಮೈಸೂರು ವಿಶ್ವವಿದ್ಯಾಲಯಕ್ಕಾಗಿ ಕುಮಾರವ್ಯಾಸ ಭಾರತವನ್ನು ಸಂಪಾದಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಆದರೆ ನ್ಯೂಮೋನಿಯ ಜ್ವರದಿಂದ ೧೯೩೭ ಅಕ್ಟೋಬರ್ ೨೪ರಂದು ವಿಧಿವಶರಾದರು.*

# ಪಂಜೆ ಮಂಗೇಶರಾಯರವರ ಕೆಲವು ಪದ್ಯಗಳು

## ಸ್ಥಿರ ಪ್ರಯತ್ನ

ಮರಳಿ ಯತ್ನವ ಮಾಡು!
ಮರಳಿ ಯತ್ನವ ಮಾಡು!
ತೊರೆಯದಿರು ಮೊದಲು ಕೈ ಗೂಡದಿರಲು.
ಹಿರಿದು ಧೈರ್ಯವ ಹಾಳು!
ತೊರೆಯದಿರು, ತೊರೆಯದಿರು!
ಮರಳಿ ಯತ್ನವ ಮಾಡು, ಸಿದ್ಧಿಸುವುದು.
ಒಂದು ಸಲ ಕೆಟ್ಟುಹೋಯ್ತೆಂದು
ನೀ ಅಂಜದಿರು ಕುಂದಿಲ್ಲ.
ಕೈಗೂಡದನಿತರಿಂದ
ನೊಂದು ಕೊಳ್ಳದೆ ಮರಳಿ
ಮುಂದೆ ಯತ್ನವ ಮಾಡು,
ಸಂದೇಹವಿಲ್ಲದದು ಸಿದ್ಧಿಸುವುದು.
ಕೆಲಸವಿದು ಕಷ್ಟವೆಂದುಳುಕಿ
ಬಿಡದಿರು, ಮಾಡು,
ಫಲಗಳನು ಕೊಡುವುದದು ಕೊನೆಗೆ ನಿನಗೆ.
ಸುಲಭವಹದಾ ಕೆಲಸ
ಫಲಿಸುವುದು, ಹುಲಿಸುವುದು
ನೆಲೆಗೆಡದೆ ಯತ್ನವನು ಮಾಡು, ಮಗುವೇ!

## ಜೋಗುಳ

ಚಂದ್ರ ಬಿಂಬದ ಮೇಲೆ ಕಂದು ಕಾಣುತಲಿಹುದು,
ಕಂದ ಮುದ್ದನ ಅಚ್ಚ ನಿಡುಹಣೆಗೆ ಜೋ!
ಕಂದ ಮುದ್ದನ ಅಚ್ಚ ನಿಡುಹಣೆಗೆ ತಾಯ್ತರಳೆ
ಚಂದದಿಂ ಬೊಟ್ಟಿಟ್ಟ ಕತ್ತುರಿಗೆ, ಜೋ!

ಹೂವು ಹೆಚ್ಚಿನದಾಯ್ತು, ಮಾವು ಮೆಚ್ಚಿನದಾಯ್ತು,
ಬೇವು ಬೆಲ್ಲದ ಸವಿಗೆ ಸರಿಯಾಯ್ತು, ಜೋ!
ಬೆವು ಬೆಲ್ಲದ ಸವಿಯ ಪಡೆಯಿತುದಿಸಲು, ಮುದ್ದು
ಆ ಒಂದು ಗೊಡ್ಡು ಹೊಸ ಹಸುವಾಯ್ತು, ಜೋ!

ಜೊಲ್ಲ ಸೂಸುವ ಬಾಯನಲ್ಲಲ್ಲಿ ತಗಲಿಸುವ –
ನಲ್ಲಲ್ಲಿ ಅಮೃತಾಂಕ ಮೂಡಿತ್ತು, ಜೋ!
ಅಲ್ಲಲ್ಲಿ ಅಮೃತ ಮುದ್ರೆಯು ಮೂಡಿ, ಮೈಯೆಲ್ಲ
ಜಲ್ಲನೇ ನವಿರೆದ್ದು ನಿಂತಿತ್ತು, ಜೋ!

ಆಕರ: ಪಂಜೆ ಮಂಗೇಶರಾಯರ ಮಕ್ಕಳ ಸಾಹಿತ್ಯ

## ನದಿ

ಎಲ್ಲಿಂದ ಬರುತಿಯೆ? ನೀರನ್ನು ತರುತಿಯೆ?
ಒಳ್ಳೆಯದಾಗಿರುತೀಯೆ, ನೀನು?
ಎಲ್ಲಿಗೆ ಹೋಗುವೆ? ನೀರನ್ನು ಸಾಗುವೆ?
ಕಡೆಗೆ ಏನಾಗುವೆ, ನೀನು?

ಬೆಟ್ಟದಾ ಹೊಡೆಯಲ್ಲಿ ಹುಟ್ಟಿದೆ ಹನಿಯಾಗಿ;
ತೊಟ್ಟಾದೆ ತುಟುಕಾದೆ, ನಾನು.
ಬೆಟ್ಟಾದೆ, ಬೆರಳಾದೆ, ತೋಳಾದೆ, ತೊಡೆಯಾದೆ,
ಪುಟ್ಟ ತೋಡಾದೆನು ನಾನು.

ಮಲೆಮರಗಳ ಮರೆಯಲ್ಲಿ ಮಲಗಿದೆನು;
ಮಳೆ ಬಿದಿರೆಲೆಯಿಂದ ಮಂದಾ
ಬೆಳಕಿಗೆ ಎಚ್ಚೆತ್ತು ಹೊರಬಂದೆ ಹರಿದಾಡಿ,
ನಲಿದಾಡಿ ಸಂತೋಷದಿಂದಾ.

ಆಡುತ್ತ, ಸುತ್ತಲು ನೋಡುತ್ತ, ತೊರೆಯನ್ನು
ಕೂಡುತ್ತ, ಓಡುತ್ತ ಬಂದೆ;
ದೂಡುತ್ತ ಕಲ್ಲನ್ನು, ಮಾಡುತ್ತ ಗುಲ್ಲನು,
ಹಾಡುತ್ತ, ನೀಡುತ್ತ ಬಂದೆ.

ಭಾರಿ ಎತ್ತರದಿಂದ ಹಾರಿದೆ ಹೆಸರಾಯ್ತು;
ನೀರಿನ ಜೋರಿನ ಜೋಗು;
ಊರಿನ ಜನರನ್ನು ಕಿವುಡು ಮಾಡಿತು ನನ್ನ
ಭೋರನೆ ಕೂಗುವ ಕೂಗು.

## ಸೂರ್ಯೋದಯ

ಕೆಂಪಿನ ಓಕುಳಿ ಸ್ನಾನದಲಿ,
ಇಂಪಿನ ಕೋಗಿಲೆ ಗಾನದಲಿ,
ಬಾನಿನ ಗದ್ದಿಗೆ ಏರಿದನು,
ಭಾನುವು ಹೊಂದಲೆ ತೋರಿದನು.

ಆ ದಿನನಾಥನ ಮೂರುತಿಗೆ
ಆದವು ಹೂಗಳು ಆರುತಿಗೆ;
ಕೋಳಿಯು ಕಹಳೆಯ ಊದಿದುದು,
ಗಾಳಿಯು ರಾಯಸ ಓದಿದುದು.

ಪಂಜೆ ಮಂಗೇಶರಾಯರ 'ಹುತ್ತರಿಯ ಹಾಡು' ಹಾಡು ಕೇಳಲು
ಇಲ್ಲಿರುವ ಯೂಟ್ಯೂಬ್ ಲಿಂಕ್‌ನ್ನು ಬಳಸಿಕೊಳ್ಳಬಹುದು.
https://www.youtube.com/watch?v=jZBTM1sgYR0

# ಕೆ. ಎಸ್. ನಿಸಾರ್ ಅಹಮ್ಮದ್



ಕವಿ ಪ್ರೊ. ಕೆ. ಎಸ್ ನಿಸಾರ್ ಅಹಮ್ಮದ್ ಅವರ ಪೂರ್ಣ ಹೆಸರು ಕೊಕ್ಕರೆ ಹೊಸಹಳ್ಳಿ ಶೇಖ್ ಹೈದರ್ ನಿಸಾರ್ ಅಹಮ್ಮದ್. ೫ನೇ ಫೆಬ್ರುವರಿ ೧೯೩೬ರಲ್ಲಿ ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಇವರ ಜನನ.  ತಂದೆ ಕೆ. ಎಸ್. ಹೈದರ್, ತಾಯಿ ಹಮೀದಾ ಬೇಗಂ.

ಭೂಗರ್ಭಶಾಸ್ತ್ರದಲ್ಲಿ ಎಂ.ಎಸ್.ಸಿ ಸ್ನಾತಕೋತ್ತರ ಪದವಿ ಇವರ ಶಿಕ್ಷಣವಾಗಿದೆ.

ಇವರಿಗೆ ಪ್ರಭಾವ ಬೀರಿದ ಗುರುಗಳು ಎಂ. ಸಿ. ಸೀತಾರಾಮಯ್ಯ, ಜಿ. ಪಿ. ರಾಜರತ್ನಂ, ಎಲ್. ಗುಂಡಪ್ಪ ಮುಂತಾದವರು. ನಿಸಾರ್ ಅಹಮ್ಮದ್‌ರವರ ಸಾಹಿತ್ಯಾಸಕ್ತಿ ೧೦ನೇ ವಯಸ್ಸಿನಲ್ಲೇ ಆರಂಭವಾಯಿತು. 'ಜಲಪಾತ'ದ ಬಗ್ಗೆ ಬರೆದ ಕವನ ಇವರ ಮೊದಲ ಕವನವಾಗಿದೆ.

ಬೆಂಗಳೂರು ಬಿಟ್ಟರೆ ಶಿವಮೊಗ್ಗ ಇವರಿಗೆ ಅತ್ಯಂತ ಪ್ರೀಯವಾದ ಊರು. ಅದು ಅವರ 'ಸೃಜನಶೀಲತೆಯ ತವರು' ಅಂತ ಅವರೇ ಹೇಳಿಕೊಂಡಿದ್ದಾರೆ. ಏಕೆಂದರೆ ಅಲ್ಲಿ ಅವರಿಗೆ ಏಕಾಂತ ಸಿಗುತ್ತಿತ್ತಂತೆ. ೧೯೬೦ರ ಹೊತ್ತಲ್ಲಿ ಆಟೋಗಳು ಇರ್ಲಿಲ್ಲ. ಬರೀ ಜಟಕಾ ಗಾಡಿಗಳಿದ್ದ ಶಿವಮೊಗ್ಗ ತನ್ನ ಹಳ್ಳಿ ಸೊಗಡಿನ ಮುಗ್ಧತೆ ಕಾಪಾಡಿಕೊಂಡು ಬಂದಿತ್ತು. ತುಂಬಾ ನಿರಾಳವಾಗಿತ್ತು. ಕೈ ಚಾಚಿದಲ್ಲಿ ಗದ್ದೆ, ತೋಟ, ಹೊಳೆ, ಕಾಲುವೆ, ಪಕ್ಷಿಗಳು ಅತ್ಯಂತ ಆನಂದ ನೀಡುವ ಪ್ರಶಾಂತ ವಾತಾವರಣ ಇತ್ತು ಎಂದಿದ್ದಾರೆ.

ನಿಸಾರ್ ಅಹಮ್ಮದ್‌ರವರು 'ಗೋವಿನ ಹಾಡು', 'ಕಿಂದರ ಜೋಗಿ', 'ಅರೇಬಿಯನ್ ನೈಟ್ಸ್ ಕಥೆಗಳನ್ನು ಓದುವ ಜೊತೆಗೆ, ಪಂಜೆ ಮಂಗೇಶರಾಯರ 'ತೆಂಕಣಗಾಳಿಯಾಟ', 'ಹುತ್ತರಿ ಹಾಡು', ಗೋವಿಂದ ಪೈ ಅವರ 'ತಾಯಿ ಬಾರೆ ಮೊಗವ ತೋರೆ' ಎಲ್ಲ ಪದ್ಯಗಳು ಇವರ ಮೇಲೆ ಪ್ರಭಾವ ಬೀರಿವೆ. ಇವರು ಹೇಳಿರುವ ಪ್ರಕಾರ ಭೂ ವಿಜ್ಞಾನ ಸೇರಿಕೊಂಡಿದ್ದರಿಂದ ಬಹಳ ಒಳ್ಳೆಯದೇ ಆಯ್ತು. ಅದು ಪ್ರಕೃತಿ ವಿಜ್ಞಾನ. ಬರೀ ಕಲ್ಲು, ಖನಿಜ, ಮಣ್ಣು ಇಷ್ಟೇ ಅಲ್ಲ. ಅವುಗಳ ಹಿಂದೆ ವೈಭವಗಳಿವೆ; ರತ್ನಗಳು, ಜ್ವಾಲಾಮುಖಿ, ಭೂಕಂಪ, ಪ್ರಾಕೃತಿಕ ಲಕ್ಷಣಗಳು– ಹೀಗೆ ಅದ್ಭುತಗಳ ಲೋಕವೊಂದು ನನ್ನ ಮುಂದೆ ತೆರೆದುಕೊಂಡಿತು. ಇದು ನನ್ನ ಕಾವ್ಯಕ್ಕೆ ತುಂಬಾ ಒತ್ತಾಸೆಯಾಗಿ ನಿಂತಿತು. ಎಷ್ಟೋ ವೈಜ್ಞಾನಿಕ ಹೋಲಿಕೆಗಳನ್ನು, ರೂಪಕಗಳನ್ನು ಕಾವ್ಯದಲ್ಲಿ ಬಳಸಿಕೊಂಡಿದ್ದೇನೆ. 'ನಿತ್ಯೋತ್ಸವ'ದ ಕವಿತೆಯಲ್ಲಿ 'ಸಹ್ಯಾದ್ರಿಯ ಲೋಹದಿರ ಉತ್ತುಂಗದ ನಿಲುಕಿನಲ್ಲಿ... ಎಂಬ ಕಲ್ಪನೆ ಬಹುಶಃ ಭೂಗರ್ಭಶಾಸ್ತ್ರ ಓದದೇ ಇರುತ್ತಿದ್ದಿದ್ದರೆ ನನಗೆ ಹೊಳೆಯುತ್ತಿರಲಿಲ್ಲವೇನೋ. ಕಣ್ಣಾರೆ ಕಂಡ, ಅನುಭವಿಸಿದ ವಿಷಯಗಳು ಅವು' ಎಂದಿದ್ದಾರೆ.

'ಮನಸ್ಸು ಗಾಂಧಿಬಜಾರು' ಹಾಗೂ 'ನಿತ್ಯೋತ್ಸವ' ಇವು ಪ್ರಸಿದ್ಧ ಕವನಸಂಕಲನಗಳಾಗಿವೆ. 'ಕುರಿಗಳು ಸಾರ್ ಕುರಿಗಳು', ಭಾರತವು ನಮ್ಮ ದೇಶ (ಸರ್ ಮೊಹಮ್ಮದ್ ಇಕ್ಬಾಲ್ ಅವರ ಸಾರೆ ಜಹಾಂ ಸೆ ಅಚ್ಚಾ ಕವನದ ಕನ್ನಡ ಭಾಷಾಂತರ) 'ಬೆಣ್ಣೆ ಕದ್ದ ನಮ್ಮ ಕೃಷ್ಣ' ಕವನ ಕವಿಯ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿವೆ.

**ಪ್ರಶಸ್ತಿ ಪುರಸ್ಕಾರಗಳು:**

'೨೦೦೬ರ ಮಾಸ್ತಿ ಪ್ರಶಸ್ತಿ', 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಗೊರೂರು ಪ್ರಶಸ್ತಿ', 'ಅನಕೃ ಪ್ರಶಸ್ತಿ', ಕೆಂಪೇಗೌಡ ಪ್ರಶಸ್ತಿ', 'ಪಂಪ ಪ್ರಶಸ್ತಿ', '೧೯೮೧ ರ ರಾಜ್ಯೋತ್ಸವ ಪ್ರಶಸ್ತಿ', ೨೦೦೩ ರ ನಾಡೋಜ ಪ್ರಶಸ್ತಿ', '೨೦೦೬ ರ ಅರಸು ಪ್ರಶಸ್ತಿ'. ಶಿವಮೊಗ್ಗದಲ್ಲಿ ನಡೆದ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

# ಕೆ. ಎಸ್. ನಿಸಾರ್ ಅಹಮ್ಮದ್ ಅವರ ಕೆಲವು ಕವನಗಳು

**ನಿಮ್ಮೊಡನಿದ್ದೂ ನಿಮ್ಮಂತಾಗದೆ.**

ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲೆದಲ್ಲಿ ಬೇರೊತ್ತಿದರೂ ಬೀಗಿ,
ಪರಕೀಯನಾಗಿ ತಲೆಯೆತ್ತುವದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

ವೃತ್ತದಲ್ಲಿ ಉನ್ಮತ್ತರಾದ
ನಿಮ್ಮ ಕುಡಿತ ಕುಣಿತ ಕೂಟಗಳು
ಕೆಣಕಿ ಎಸೆಯದಿದ್ದರೂ,
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ
ಸಂಯಮವನ್ನೇ ಪೋಷಿಸಿ ಸಾಕುತ್ತ
ರೇಖೆಯಲ್ಲೆ ದೊಂಬರಾಟ ನಡೆಸುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

ಒಳಗೊಳಗೆ ಬೇರುಕೊಯ್ದು
ಲೋಕದೆದುರಲ್ಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿಹಿರಿ ಪೇಪರೋದಿ ಹರಟಿ
ಬಾಳ ತಳ್ಳುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

ನಿಮ್ಮ ಮಾತುಕಥೆಗಳಲ್ಲಿ ಹುದಿಗಿದ ಬೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನೀಯತ್ತು ಹಕ್ಕು
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿನ ಕಣ್ಣು ತುಂಬಿದ್ದರೂ,
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನದುರಿನಲ್ಲೇ ತನಿಖೆಮಾಡುವ ಕ್ಷಣವನ್ನು
ಹುಸಿನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ

**ಬೆಣ್ಣೆಗಳ ಕೃಷ್ಣ**

ಬೆಣ್ಣೆ ಕದ್ದ ನಮ್ಮ ಕೃಷ್ಣ, ಬೆಣ್ಣೆ ಕದ್ದನಮ್ಮ
ಬೆಣ್ಣೆಯ ಕದ್ದು ಜಾರುತ ಬಿದ್ದು
ಮೊಳಕಾಲೂದಿಸಿಕೊಂಡ
ಬಿಂದಿಗೆ ಬಿದ್ದು ಸಿಡಿಯಲು ಸದ್ದು
ಬೆಚ್ಚಿದ ರಾದೆಯ ಗಂಡ ॥

ತಾಯಿ ಬಂದಳೋಡಿ ಕಳ್ಳನ ಕಣ್ಣಿನಲ್ಲಿ ಕೊಡಿ !
ಕಣ್ಣಲಿ ಆಕೆ ಸಿಟ್ಟನು ತಾಳಿ
ಸೊಂಟಕೆ ಕೈಯಿಟ್ಟು,
ಆದಳು ಅರೆ ಚಣ ಭೀಕರ ಕಾಳಿ
ದುರುದುರು ಕಣ್‌ಬಿಟ್ಟು !
ಹಣೆ ತುಟಿ ಕೆನ್ನೆಗೆ ಬೆಣ್ಣೆ ಮೆತ್ತಿದ
ಒರಟನ ನೋಟಕ್ಕೆ
ಇಳಿಯಿತು ಕೋಪ ಅರಳಿತು ಕೆಂದುಟಿ
ತುಂಟನ ಆಟಕ್ಕೆ;
ತಪ್ಪಿದ ದಂಡಕೆ ನಿಟ್ಟುಸಿರೆಳೆದ
ಬೆಣ್ಣೆಗಳ್ಳ ನೀಲ.
ತಟ್ಟನೆ ಅಳುವುದ ನಿಲ್ಲಿಸಿ ನಕ್ಕ
ಬಾಯಗಲಿಸಿ ಬಾಲ
ಹರಡಿದ ಬೆಳುದಿಂಗಳ ಜಾಲ ॥

ಅವನ ಅಕುಟಿತ ಬೆಣ್ಣೆಯಂಥ ನಗು
ಕಾಯಲಿ ಜಗದವರ;
ಸತತ ನಗಿಸಲಿ ನಗದವರ ॥

ಆಕರ: ನಿಸಾರ್ ಅಹಮ್ಮದ್ ಅವರ ಆಯ್ದ ಕವಿತೆಗಳು
(ಪ್ರಥಮ ವಿಶ್ವ ಕನ್ನಡ ಸಂಮೇಳನ ಸಾಹಿತ್ಯ ಮಾಲೆ–೧೨

ಕೆ.ಎಸ್. ನಿಸಾರ್ ಅಹಮ್ಮದ್‌ರವರ ಇನ್ನಷ್ಟು ಕವನಗಳನ್ನು ಕೇಳಲು ಇಲ್ಲಿರುವ ಯೂಟ್ಯೂಬ್ ಲಿಂಕ್‌ನ್ನು ಬಳಸಿಕೊಳ್ಳಬಹುದು. **https://www.youtube.com/watch?v=I-eAu8OJ0Os**

ಪೂರಣ ಯೋಜನೆ
Poorana 2019-20 Project
is Supported by
Many Individual Donors

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪೇಕ್ಷಣೀಯ.

ಸಂಪರ್ಕ ಮಾಹಿತಿ:
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# 76, 'ಪುಷ್ಪಾಂಜಲಿ', 3ನೇ ಅಡ್ಡರಸ್ತೆ
ಶಿವಗಿರಿ, ಧಾರವಾಡ – 580007
ಮೊ: 998 666 1055
dhwanitrust@gmail.com
www.dhwanitrust.org